1. ರಾಜ್ಯಪಾಲರ ಭಾಷಣ

Sri Manohar K. Kinekar (Uchagaon):- Your highness...

ಘನತೆವೆತ್ತ ರಾಜ್ಯಪಾಲರು (ಶ್ರೀ ಟಿ.ಎನ್. ಚತುರ್ವೇದಿ):– ಸನ್ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಸಭಾಧ್ಯಕ್ಷರೇ, ಹಾಗೂ ಸನ್ಮಾನ್ಯ ಸದಸ್ಯರೇ,

ಕರ್ನಾಟಕ ವಿಧಾನ ಮಂಡಲದ ಈ ಜಂಟಿ ಅಧಿವೇಶನಕ್ಕೆ ನಿಮ್ಮೆಲ್ಲರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ...

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):– ಸನ್ಮಾನ್ಯ ರಾಜ್ಯಪಾಲರು ಕನ್ನಡದಲ್ಲಿಯೇ ಪೂರ್ತಿಯಾಗಿ ಮಾತನಾಡಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡುತ್ತೇನೆ. ಇದು ಕನ್ನಡ ರಾಜ್ಯ–ಕರ್ನಾಟಕ ರಾಜ್ಯ ಸಂಪೂರ್ಣ ಕನ್ನಡದಲ್ಲಿಯೇ ತಮ್ಮ ಭಾಷಣ ಆಗಬೇಕು. ತಮ್ಮ ಬಗ್ಗೆ ನಮಗೆ ಬಹಳ ಗೌರವವಿದೆ. ನಿಮ್ಮ ಬಗ್ಗೆ ನಮಗೆ ಬಹಳ ಪ್ರೀತಿ ಇದೆ, ವಿಶ್ವಾಸ ಇದೆ. ತಮ್ಮ ವಿರುದ್ಧ ನಮ್ಮದೇನೂ ಪ್ರತಿಭಟನೆ ಇಲ್ಲ. ಆದರೆ ರಾಜ್ಯಭಾಷೆ ಕನ್ನಡ. ನೂರಕ್ಕೆ ನೂರು ಇಲ್ಲಿ ಕನ್ನಡದ ಬೆಳವಣಿಗೆ ಆಗಬೇಕು, ಕನ್ನಡದ ಬಗ್ಗೆ ಇಲ್ಲಿ ಪ್ರಾಮಾಣಿಕ ಚಿಂತನೆ ಆಗಬೇಕು. ಇದುವರೆಗೂ ಬಂದಿರತಕ್ಕಂಥ ಎಲ್ಲಾ ಸರ್ಕಾರಗಳು, ಕರ್ನಾಟಕವನ್ನು ಕಡೆಗಣಿಸಿದ್ದಾರೆ. ಗಡಿನಾಡನ್ನು ಕಡೆಗಣಿಸಿದ್ದಾರೆ. ಹೊರನಾಡನ್ನು ಕಡೆಗಣಿಸಿದ್ದಾರೆ. ಕನ್ನಡದ ಬಗ್ಗೆ ಅಪಾರವಾದಂಥ ಅಗೌರವ ಇಲ್ಲಿ ನಡೆದಿದೆ. ಆದ್ದರಿಂದ ಈ ರಾಜ್ಯದಲ್ಲಿ ಮಹಾಜನ್ ವರದಿ ಜಾರಿಯಾಗಬೇಕು.

ಸನ್ಮಾನ್ಯ ರಾಜ್ಯಪಾಲರು:– ಸನ್ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಸಭಾಧ್ಯಕ್ಷರೇ, ಕರ್ನಾಟಕ ವಿಧಾನ ಮಂಡಲದ ಈ ಜಂಟಿ ಅಧಿವೇಶನಕ್ಕೆ ನಿಮ್ಮೆಲ್ಲರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ನಾವು ಈಗ ಹೊಸದಾಗಿ ಚುನಾಯಿತವಾದ ವಿಧಾನ ಸಭೆಯನ್ನು ಹೊಂದಿದ್ದು...

(ಮಾನ್ಯ ರಾಜ್ಯಪಾಲರು ತಮ್ಮ ಭಾಷಣವನ್ನು ಮುಂದುವರಿಸಿದರು)

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ರಾಜ್ಯಪಾಲರೇ, ನಿಮ್ಮ ವಿರುದ್ಧ ನಮ್ಮ ವೈಯಕ್ತಿಕ ಪ್ರತಿಭಟನೆ ಏನೂ ಇಲ್ಲ. ನಿಮ್ಮ ಬಗ್ಗೆ ನಮಗೆ ಗೌರವ ಇದೆ. ಈ ಸರ್ಕಾರದ ವಿರುದ್ಧ ನಮ್ಮ ಪ್ರತಿಭಟನೆ. ನಾನು ಕಪ್ಪು ಬಟ್ಟೆಯನ್ನು ಪ್ರದರ್ಶನ ಮಾಡುವುದರ ಮೂಲಕ ನನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸಿ ಸದನದಿಂದ ಹೊರಗೆ ಹೋಗುತ್ತಿದ್ದೇನೆ..

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಕಪ್ಪು ಬಟ್ಟೆ ಪ್ರದರ್ಶನ ಮಾಡುತ್ತಾ ಸಭೆಯಿಂದ ಹೊರನಡೆದರು, ನಂತರ ರಾಜ್ಯಪಾಲರು ತಮ್ಮ ಭಾಷಣವನ್ನು ಮುಂದುವರಿಸಿದರು)

(Hon'ble Members Sri Manohar K. Kinekar and Sri Digambery Y. Patil have also walked out from the House)

ನಾವು ಈಗ ಹೊಸದಾಗಿ ಚುನಾಯಿತವಾದ ವಿಧಾನ ಸಭೆಯನ್ನು ಹೊಂದಿದ್ದು, ಈ ಸಭೆಯಲ್ಲಿರುವ ನಿಮ್ಮಲ್ಲಿ 121 ಸದಸ್ಯರು ಈ ಮೊದಲು ಈ ಸದನದ ಸದಸ್ಯರಾಗಿ ಅನುಭವಗಳಿಸಿರುತ್ತೀರಿ. ನಿಮ್ಮಲ್ಲಿ 103 ಸದಸ್ಯರು ಈ ಗೌರವಾನ್ವಿತ ಸದನಕ್ಕೆ ಮೊದಲ ಬಾರಿಗೆ ಪ್ರವೇಶಿಸಿದ್ದೀರಿ. ಆದುದರಿಂದ, ಇದು ನಿಮಗೆ ನಿಜವಾಗಿಯೂ ವಿಶೇಷ ಸಂದರ್ಭವಾಗಿದೆ.